ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	312
ಮಾನ್ಯ ಸದಸ್ಯರ ಹೆಸರು	ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್)
ಉತ್ತರಿಸಬೇಕಾದ ದಿನಾಂಕ	09.12.2020
ಉತ್ತರಿಸುವ ಸಚಿವರು	ವಸತಿ ಸಚಿವರು

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಚಾಮರಾಜನಗರದಲ್ಲಿ ವಸತಿ ಇಲಾಖೆ ಅಥವಾ ಹೌಸಿಂಗ್ ಬೋರ್ಡ್ ವತಿಯಿಂದ ನಿವೇಶನಗಳನ್ನು ರಚನೆ ಮಾಡಿ, ಟೌನ್‌ಶಿಪ್ ನಿರ್ಮಿಸಲು ಯೋಜನೆಯನ್ನು ರೂಪಿಸಲಾಗಿದೆಯೇ; ಯೋಜನೆಯ ರೂಪುರೇಷೆಗಳೇನು; (ವಿವರ ಒದಗಿಸುವುದು)</td><td>ಕರ್ನಾಟಕ ಗೃಹ ಮಂಡಳಿ ವತಿಯಿಂದ ನಿವೇಶನಗಳನ್ನು ರಚನೆ ಮಾಡಿ ಟೌನ್‌ಶಿಪ್ ನಿರ್ಮಿಸಲು ಯೋಜನೆಯನ್ನು ರೂಪಿಸಲಾಗಿದೆ.

ವಿವರಗಳು ಈ ಕೆಳಕಂಡಂತೆ ಇರುತ್ತದೆ:-

<table><tr><td>ಚಾಮರಾಜನಗರ ತಾಲ್ಲೂಕು, ಕಸಬಾ ಹೋಬಳಿ, ಮಾದಾಪುರ ಮತ್ತು ಕಿರಗಸೂರು ಗ್ರಾಮ</td><td>100 ಎಕರೆ ಜಮೀನಿನಲ್ಲಿ ಅನುಪಾತದ ಪಾಲುದಾರಿಕೆಯಡಿ ವಸತಿ ಯೋಜನೆ ಕಾರ್ಯ ಪ್ರಗತಿಯಲ್ಲಿರುತ್ತದೆ.</td></tr><tr><td>ಚಾಮರಾಜನಗರ ತಾಲ್ಲೂಕು, ಕಸಬಾ ಹೋಬಳಿ, ಚಾಮರಾಜನಗರ ಮತ್ತು ಕಾಡಹಳ್ಳಿ ಗ್ರಾಮ</td><td>96 ಎಕರೆ 29 ಗುಂಟೆ ಜಮೀನಿನಲ್ಲಿ ವಸತಿ ಬಡಾವಣೆ ನಿರ್ಮಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.</td></tr></table></td></tr>
<tr><td>ಆ</td><td>ಚಾಮರಾಜನಗರ, ಮೈಸೂರು ಜಿಲ್ಲೆಗಳಲ್ಲಿ ತಾಲ್ಲೂಕು ಕೇಂದ್ರಗಳ ಅವ್ಯವಸ್ಥಿತ ಬೆಳವಣಿಗೆಯನ್ನು ತಡೆಯಲು, ನಿವೇಶನಗಳ ಬೇಡಿಕೆ ಬಗ್ಗೆ ಸರ್ವೆ ನಡೆಸಿ, ವಸತಿ ಯೋಜನೆಗಳನ್ನು ರೂಪಿಸಲು ಕ್ರಮ ಜರುಗಿಸಲಾಗುವುದೇ;</td><td>ಚಾಮರಾಜನಗರ, ಮೈಸೂರು ಜಿಲ್ಲೆಗಳಲ್ಲಿ ತಾಲ್ಲೂಕು ಕೇಂದ್ರಗಳ ಅವ್ಯವಸ್ಥಿತ ಬೆಳವಣಿಗೆಯನ್ನು ತಡೆಯಲು ಕರ್ನಾಟಕ ಗೃಹ ಮಂಡಳಿ ಮತ್ತು ರಾಜೀವ್ ಗಾಂಧಿ ವಸತಿ ನಿಗಮ (ನಿಯಮಿತ) ದಿಂದ ನಿವೇಶನಗಳ ಬೇಡಿಕೆ ಬಗ್ಗೆ ಸರ್ವೆ ನಡೆಸಿ, ವಸತಿ ಯೋಜನೆಗಳನ್ನು ರೂಪಿಸಲು ಕ್ರಮ ಜರುಗಿಸಲಾಗುತ್ತಿದೆ.</td></tr>
</table>

ಇ	ಮೈಸೂರು ನಗರ ಸಮೀಪದ ಇಮ್ಮಾವು ಬಳಿ ವಸತಿ ಇಲಾಖೆ/ಹೌಸಿಂಗ್ ಬೋರ್ಡ್ ವತಿಯಿಂದ ಕೈಗೊಳ್ಳಲು ಉದ್ದೇಶಿಸಲಾಗಿದ್ದ ಟೌನ್‌ಶಿಪ್/ ವಸತಿ ಯೋಜನೆ ಯಾವ ಹಂತದಲ್ಲಿದೆ?	ಮೈಸೂರು ನಗರ ಸಮೀಪದ ಇಮ್ಮಾವು ಗ್ರಾಮದ ಸರ್ವೆ ನಂ.377 ಹಾಗೂ ಇತರೆಯಲ್ಲಿನ ಒಟ್ಟು 110-08 ಎಕರೆ ಜಮೀನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸುಪರ್ದಿಯಲ್ಲಿದ್ದು, ವಸತಿ ಯೋಜನೆಗಾಗಿ ಕರ್ನಾಟಕ ಗೃಹ ಮಂಡಳಿಗೆ ಸದರಿ ಜಮೀನನ್ನು ಹಸ್ತಾಂತರಿಸಿದ ನಂತರ ವಸತಿ ಯೋಜನೆಯನ್ನು ಕೈಗೊಳ್ಳಲು ಕ್ರಮ ವಹಿಸಲಾಗುವುದು.

(ಸಂಖ್ಯೆ: ವಇ 171 ಕಗೃಮಂ 2020)

(ವಿ. ಸೋಮಣ್ಣ)
ವಸತಿ ಸಚಿವರು.